**ದಿನಾಂಕಃ 03.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಮೃತರು ನನ್ನ ತಂದೆ. ಅಪಘಾತವಾದ ವಿಚಾರವನ್ನು ಪೊಲೀಸರು ನನಗೆ ಕರೆ ಮಾಡಿ ತಿಳಿಸಿರುತ್ತಾರೆ. ಅಪಘಾತವಾದ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆಯಲ್ಲಿ ಹೆಚ್ಚಿನ ವಾಹನ ದಟ್ಟಣೆ ಇರುತ್ತದೆ ಎಂದರೆ ಸರಿ. ಅಪಘಾತ ರಾತ್ರಿ 9.30 ಗಂಟೆಯ ಸಮಯದಲ್ಲಿ ಸಂಭವಿಸಿರುತ್ತದೆ. ಅಪಘಾತವಾದ ರಸ್ತೆಯಲ್ಲಿ ರಸ್ತೆಯನ್ನು ದಾಟಲು ಯಾವುದೇ ಬಿಳಿ ಪಟ್ಟಿ ಇರಲಿಲ್ಲ, ಆದರೆ ರಸ್ತೆ ದಾಟುವ ಸ್ಥಳ ಇತ್ತು.

ಅಪಘಾತವಾದ ನಂತರ ನನ್ನ ತಂದೆಯನ್ನು ಕೇರ್ ಏಷ್ಯಾ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನಾನು ಪಿಯುಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಆಂಗ್ಲ ಭಾಷೆ ಸ್ವಲ್ಪ ಮಟ್ಟಿಗೆ ಓದಲು ಮತ್ತು ಬರೆಯಲು ಬರುತ್ತದೆ. ಸಾಕ್ಷಿಗೆ ಎಂ.ಎಲ್.ಸಿ ಯ ಪ್ರತಿಯನ್ನು ತೋರಿಸಿ ಅಪಘಾತದ ಹಿನ್ನೆಲೆಯ ಬಗ್ಗೆ ಓದುವಂತೆ ತಿಳಿಸಿದ್ದು, ಸಾಕ್ಷಿಯು ಅದನ್ನು ಓದಿರುತ್ತಾರೆ. ಸದರಿ ದಾಖಲಾತಿಯಲ್ಲಿ A/H/O RTA hit and run bus around @ 9.20 p.m. near ಎಂದು ಬರೆದಿರುತ್ತದೆ ಎಂದರೆ ಸರಿ. ಸದರಿ ದಾಖಲಾತಿ ನೆರಳಚ್ಚು ಪ್ರತಿಯಾದ ಕಾರಣ ಅದನ್ನು ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ. ಅಪಘಾತ ಪಡಿಸಿದ ಬಸ್ಸು ಹೊರಟು ಹೋಗಿದ್ದು, ಅಲ್ಲಿಯೇ ಹತ್ತಿರದಲ್ಲಿ ತಂಗುದಾಣದಲ್ಲಿ ನಿಂತಿದ್ದ ವಿ.ಆರ್.ಎಲ್ ಲಾರಿಯನ್ನು ಅಪಘಾತದಲ್ಲಿ ಭಾಗಿಯಾದೆ ಎಂದು ತಪ್ಪಾಗಿ ಸೇರ್ಪಡೆ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಆಪಾದಿತ ವಾಹನ ಭಾಗಿಯಾದ ಬಗ್ಗೆ ನಿಪಿ 13 ರಲ್ಲಿ ನಮೂದು ಇಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಆಪಾದಿತ ವಾಹನಕ್ಕೂ, ನನ್ನ ತಂದೆಗೆ ಆದ

ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆಪಾದಿತ ವಾಹನ ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ನಿಪಿ 2 ರಲ್ಲೂ ಸಹ ಯಾವುದೋ ವಾಹನ ಅಪಘಾತಪಡಿಸಿರುವುದಾಗಿ ನಮೂದು ಇದೆ ಎಂದರೆ ಸರಿಯಲ್ಲ. ನನ್ನ ತಂದೆ ಯಾವುದೋ ಒಂದು ವಾಹನ ಅಪಘಾತಪಡಿಸಿದ್ದು, ಪರಿಹಾರ ಪಡೆಯುವ ಉದ್ದೇಶದಿಂದ ಪೊಲೀಸರೊಂದಿಗೆ ಶಾಮೀಲಾಗಿ ಆಪಾದಿತ ವಾಹನದ ವಿರುದ್ದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಪಾದಿತ ವಾಹನ ಅಪಘಾತದಲ್ಲಿ ಭಾಗಿಯಾಗಿಲ್ಲ ಎಂಬ ವಿಚಾರ ತಿಳಿದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ನನ್ನ ತಂದೆ ಮೃತಪಡುವ ಪೂರ್ವದಲ್ಲಿ ದಿನಗೂಲಿ ನೌಕರನಾಗಿ ಕೆಲಸ ಮಾಡುತ್ತಿದ್ದೆ. ನನ್ನ ಸಂಪಾದನೆಯಿಂದ ನಾನು ನನ್ನ ತಾಯಿಯನ್ನು ನೋಡಿಕೊಳ್ಳುತ್ತಿದ್ದೇನೆ ಎಂದರೆ ಸರಿ. ನನ್ನ ತಾಯಿ ಗೃಹಿಣಿ. ನಾನು ಒಬ್ಬನೇ ಮಗ. ಮೃತರು ನನ್ನ ತಂದೆ ಮತ್ತು 1ನೇ ಅರ್ಜಿದಾರರು ನನ್ನ ತಾಯಿ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಕೆಲಸದ ಬಗ್ಗೆ ಮತ್ತು ಅವರಿಗೆ ಬರುತ್ತಿದ್ದ ಆದಾಯದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನನ್ನ ತಂದೆ ಕೆಲಸಕ್ಕೆ ಸೇರಿದ ಬಗ್ಗೆ ನೇಮಕಾತಿ ಆದೇಶ ಪತ್ರವನ್ನು ಹಾಜರುಪಡಿಸಿಲ್ಲ. ನನ್ನ ತಂದೆಯ ವಯಸ್ಸನ್ನು ತೋರಿಸಲು ಆಧಾರ್ ಕಾರ್ಡನ್ನು ಹಾಜರುಪಡಿಸಿರುತ್ತೇನೆ. ಅಪಘಾತವಾದಾಗ ನನ್ನ ತಂದೆಗೆ 60 ವರ್ಷಕ್ಕಿಂತಲೂ ಹೆಚ್ಚಿ ನ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ನನ್ನ ತಂದೆಗೆ 54 ವರ್ಷ ವಯಸ್ಸು ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಮತ್ತು ಅವರಿಗೆ ಯಾವುದೇ

ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ 11 ಅನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಅಂತ್ಯಸಂಸ್ಕಾರ ಮತ್ತು ಇತರೆ ಖರ್ಚುಗಳಿಗೆ ನಾನು ಹೇಳಿರುವಷ್ಟು ಹಣ ಖರ್ಚು ಆಗಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಆದಾಯವನ್ನು ನಾನು ಅವಲಂಬಿಸಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣದಿಂದ ನನಗೆ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**